# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 30.12.2021ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2021ನೇ ಸಾಲಿನ ಎಂಟನೇ ಸಾಮಾನ್ಯ ಸಭೆಯ ನಡವಳಿಗಳು.

ಉಪಸ್ಥಿತರು

ಅನುಪಸ್ಥಿತರು

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯನ್ನು ಮುಂದುವರಿಸುವಂತೆ ಕುಲಪತಿಗಳನ್ನು ವಿನಂತಿಸಿದರು.

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ರಾಜ್ಯ ಮಟ್ಟದ ಕೃಷಿ ಸಮ್ಮೇಳನವು ದಿನಾಂಕ 14, 15, 16 ಜನವರಿ 2022 ರಂದು ದಕ್ಷಿಣ ಕನ್ನಡ ಜಿಲ್ಲೆಯ ಕೊಲ್ನಾಡು ಮುಲ್ಕಿಯಲ್ಲಿ ಜರಗಲಿದ್ದು ಈ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ಸಹಯೋಗ ಹಾಗೂ ಸಹಕಾರವನ್ನು ಕೇಳಿರುವ ವಿಷಯವನ್ನು ಸಭೆಗೆ ತಿಳಿಸಿದರು.

2. ಘನತೆವೆತ್ತ ಕುಲಾಧಿಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27.12.2021 ರಂದು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಸಮ್ಮೇಳನದಲ್ಲಿ ಭಾಗವಹಿಸಿರುವ ಬಗ್ಗೆ ಹಾಗೂ ಸಭೆಯಲ್ಲಿ ಚರ್ಚೆಗೆ ಬಂದ ವಿಚಾರಗಳನ್ನು ಸವಿಸ್ತಾರವಾಗಿ ಸಿಂಡಿಕೇಟಿನ ಗಮನಕ್ಕೆ ತಂದರು.

   ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಬೆಳವಣಿಗೆಗಳ ಬಗ್ಗೆ ಎಲ್ಲಾ ಕುಲಪತಿಯವರುಗಳಿಗೆ ಮಾತನಾಡಲು ಸಮಯಾವಕಾಶ ನೀಡಿರುವುದು, ವಿಶ್ವವಿದ್ಯಾನಿಲಯಗಳು ಅವಿಷ್ಕಾರಯುತ ಸಂಶೋಧನಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು; ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿಕೊಂಡು ತಾಂತ್ರಿಕವಾಗಿ ಪ್ರಾಯೋಗಿಕವಾಗಿ ಅಭಿವೃದ್ಧಿಗೊಳ್ಳಬೇಕು; ವಿಶ್ವವಿದ್ಯಾನಿಲಯಗಳಲ್ಲಿ ಅನುಷ್ಠಾನಗೊಳಿಸಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಸ್ಥಿತಿಗತಿ ಇರುವ ಗೊಂದಲಗಳು, ಪಠ್ಯಕ್ರಮಗಳನ್ನು ತಯಾರಿಸುವ ಸಂದರ್ಭಗಳಲ್ಲಿ ಅನುಸರಿಸಿಕೊಂಡಿರುವ ಮಾರ್ಗಸೂಚಿಗಳು, ಕಾರ್ಯಯೋಜನೆಗಳು; ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಸರ್ಟಿಫಿಕೇಟು, ಡಿಪ್ಲೋಮಾ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿರುವ ಮಾಹಿತಿಗಳ ವಿವರಗಳು, ವಿವಿಧ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗಳ ಮಾಹಿತಿಗಳು ಇತ್ಯಾದಿ ವಿಚಾರಗಳು.

   ಮುಂದುವರಿದು, ವಿಶ್ವವಿದ್ಯಾನಿಲಯಗಳಲ್ಲಿ ಮಂಜೂರಾಗಿ ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿಗೊಳಿಸಲು ಅತೀ ಶೀಘ್ರವಾಗಿ ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿರುವುದು; ವಿಶ್ವವಿದ್ಯಾನಿಲಯಗಳು ರಾಜ್ಯದ ವಿವಿಧ ಇತರೆ ವಿಶ್ವವಿದ್ಯಾನಿಲಯಗಳಲ್ಲಿರುವ, ಸ್ವಾಯತ್ತ ಕಾಲೇಜುಗಳಲ್ಲಿರುವ Best Practiceಗಳನ್ನು ತಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು; ವಿಶ್ವವಿದ್ಯಾನಿಲಯಗಳಲ್ಲಿ ಯುಜಿಸಿ ಮಾರ್ಗಸೂಚಿಯನ್ನು ಅನುಸರಿಸಿಕೊಂಡು ಬೋಧಕ ಮತ್ತು

ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಹಾಗೂ ಮುಂಬಡ್ತಿ ಪ್ರಕ್ರಿಯೆಗಳನ್ನು ಪಾರದರ್ಶಕವಾಗಿ ನಡೆಸುವುದು; ವಿಶ್ವವಿದ್ಯಾನಿಲಯಗಳಲ್ಲಿ ನೇಮಕಾತಿ ಹೊಂದುವ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಕೈಗೊಳ್ಳುವ ವಿಚಾರವನ್ನು ತಿಳಿಸಿದರು.

ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಕಾಯ್ದೆಗೆ ಈಗಾಗಲೇ ತಿದ್ದುಪಡಿ ಮಾಡಿಕೊಂಡಿರುವುದನ್ನು ಹಾಗೂ ಪ್ರಾಧಿಕಾರಗಳಲ್ಲಿ ಅನುಮೋದನೆಗೊಳ್ಳುವ ವಿಚಾರವನ್ನು ಪ್ರಸ್ತಾಪಿಸಿದರು; ವಿಶ್ವವಿದ್ಯಾನಿಲಯಗಳಿಂದ ಈಗಾಗಲೇ ಸರಕಾರಕ್ಕೆ ಸಲ್ಲಿಸಲಾಗಿರುವ ವಿನಿಯಮಗಳು, ತಿದ್ದುಪಡಿ ವಿನಿಯಮಗಳು, ಪರಿನಿಯಮಗಳು ಮತ್ತು ಇತ್ಯರ್ಥಕ್ಕೆ ಬಾಕಿಯಿರುವ ಪ್ರಕರಣಗಳನ್ನು ಪಟ್ಟಿಮಾಡಿಕೊಂಡು ಸರಕಾರದ ಹಂತದಲ್ಲಿ ಶೀಘ್ರವಾಗಿ ಕ್ರಮ ಕೈಗೊಳ್ಳುವುದು;

ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ಪರೀಕ್ಷೆ, ಪರೀಕ್ಷಾ ಫಲಿತಾಂಶ ಮತ್ತು ಅಂಕ ಪಟ್ಟಿ ವಿತರಣೆ ಹಾಗೂ ಘಟಿಕೋತ್ಸವದ ವಿಚಾರದ ಬಗ್ಗೆ ಪ್ರಸ್ತಾಪಿಸಿರುವ ವಿಚಾರ; ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿ ಪ್ರವೇಶಾತಿ ಮತ್ತು ಪರೀಕ್ಷಾ ಕಾರ್ಯವನ್ನು ಸರಕಾರದ ಉನ್ನತ ಶಿಕ್ಷಣ ಇಲಾಖೆಯು ಅಭಿವೃದ್ಧಿ ಪಡಿಸಿರುವ ಸಾಫ್ಟ್‌ವೇರ್ ಆದ ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯಡಿ (UUCMS) ಕೈಗೊಳ್ಳಬೇಕಾಗಿರುವ ವಿಚಾರವನ್ನು ಸಭೆಗೆ ತಿಳಿಸಿದರು.

ವಿಶ್ವವಿದ್ಯಾನಿಲಯ ಮತ್ತು ಸಂಯೋಜಿತ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ಕಾಲೇಜುಗಳ ಕಾರ್ಯಕ್ರಮಗಳಿಗೆ ಪ್ರವೇಶಾತಿಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವ ಸಾಧ್ಯತೆಗಳ ಬಗ್ಗೆ ಚರ್ಚಿಸಲಾಯಿತು. ಮುಂದುವರಿದು, ಘನತೆವೆತ್ತ ರಾಜ್ಯಪಾಲರ ಆಶಯದಂತೆ, ಘಟಿಕೋತ್ಸವದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳು ಖಾದಿಯನ್ನು ceremonial robes ಗೆ ಬಳಸುವಂತೆ ಹಾಗೂ ಘಟಿಕೋತ್ಸವದಲ್ಲಿ ರಾಜ್ಯಪಾಲರ ಆಶಯ ಭಾಷಣಕ್ಕೆ ಅವಕಾಶ ಕಲ್ಪಿಸಲು ಪರಿನಿಯಮದಲ್ಲಿ ಸೂಕ್ತ ತಿದ್ದುಪಡಿ ಮಾಡಿಕೊಳ್ಳುವಂತೆ ಸೂಚಿಸಲಾಯಿತು.

**I ನಡವಳಿಯ ದೃಢೀಕರಣ.**

**ದಿನಾಂಕ 20.12.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.**

ದಿನಾಂಕ 20.12.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ.ಘಟಕ ಸಾ.ಸ.7:69 (2021)** ಕ್ಕೆ ಸಂಬಂಧಿಸಿ ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಮೇಶ್.ಕೆ., ಇವರು ಸಲ್ಲಿಸಿದ ಅಸಮ್ಮತಿ ಪತ್ರದಲ್ಲಿನ ಆಕ್ಷೇಪಣೆಯ ಕ್ರಮ ಸಂಖ್ಯೆ 3 ರಲ್ಲಿ ನಮೂದಿಸಲಾದ "*ಅನುಮೋದನೆಯ*" ನ್ನು ಅನಾಮದೇಯ ಎಂದು ತಿದ್ದುಪಡಿ ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.7:190 (2021)**

**ವಿಷಯ:** ಸಂತ ಆಗ್ನೆಸ್ ಕಾಲೇಜು (ಸ್ವಾಯತ್ತ), ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2022–23ನೇ ಸಾಲಿನಿಂದ ಸ್ನಾತಕ ಪದವಿಯಲ್ಲಿ Co-Education System ಪ್ರಾರಂಭಿಸುವ ಬಗ್ಗೆ.

**ತಿದ್ದುಪಡಿ ನಿರ್ಣಯ:** ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸಿನಂತೆ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬಹುದೆಂಬುದಾಗಿ ನಿರ್ಣಯಿಸಲಾಯಿತು.

## II ಅನುಸರಣಾ ವರದಿಯ ಅನುಮೋದನೆ

ದಿನಾಂಕ 22.10.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ

**ದಿನಾಂಕ 22.10.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಆರನೇ ಸಾಮಾನ್ಯ ಸಭೆಯ ಕಾರ್ಯಸೂಚಿ ಸಂಖ್ಯೆ ಸಾರ್ವತ್ರಿಕ : ಸಾ.ಸ.6:42 (2021) ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯಲ್ಲಿ ವ್ಯಾಖ್ಯಾನಿಸಿರುವ "*ಸದರಿ ವಿಷಯಕ್ಕೆ ಸಂಬಂಧಿಸಿ ಸಿಂಡಿಕೇಟು ಸಭೆಯ ನಿರ್ಣಯದಂತೆ ಕುಲಸಚಿವರ ಪತ್ರ ಸಂಖ್ಯೆ: MU/REG/GEN/33/2015-16/G2 ದಿನಾಂಕ 12.11.2021ರಲ್ಲಿ ಅಧ್ಯಕ್ಷರು, ಆಂತರಿಕ ದೂರು ಸಮಿತಿ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ. ಹಾಗೂ ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ 14.12.2021ರಲ್ಲಿ ಈ ಬಗ್ಗೆ ICC ಅಧ್ಯಕ್ಷರಿಗೆ ನೆನಪೋಲೆ ಕಳುಹಿಸಲಾಗಿದೆ.*" ಈ ವಿಚಾರದ ಬಗ್ಗೆ ಸಭೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ICC ಅಧ್ಯಕ್ಷರಿಗೆ ಸೂಚಿಸಲು ಹಾಗೂ ಈ ಕುರಿತು ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಸೂಚಿಸಿ ಉಳಿದಂತೆ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.**

## III ಈ ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.8:1 (2021)

**ವಿಷಯ:** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ M.Sc. Chemistry ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ M.Sc. Chemistry ಕಾರ್ಯಕ್ರಮವನ್ನು ಶೈಕ್ಷಣಿಕ ವರ್ಷ 2022–23ನೇ ಸಾಲಿನಿಂದ ಪ್ರಾರಂಭಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿಯೂ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.8:2 (2021)

**ವಿಷಯ:** ಶೈಕ್ಷಣಿಕ ವರ್ಷ 2021–22ನೇ ಸಾಲಿಗೆ, ಆಯ್ಕೆ ವಿಷಯಕ್ಕೆ (Open Elective) ಸಂಯೋಜನೆಯ ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡುವ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.8:3 (2021)

**ವಿಷಯ:** ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ಇಲ್ಲಿ ಬಿ.ವೋಕ್ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.8:4 (2021)

**ವಿಷಯ:** ಪಿಹೆಚ್.ಡಿ. ಪದವಿ ಪ್ರದಾನ ಮಾಡಿದ ಬಗ್ಗೆ.

**ನಿರ್ಣಯ:** ನಿಯಮಾನುಸಾರ ಅನುಮೋದಿಸಲಾಯಿತು / ಅವಗಾಹಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.8:5 (2021)

**ವಿಷಯ:** ಕಾನೂನು ಪದವಿಯ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಕೊನೆಯ ಬಾರಿ ನಡೆಸಿರುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:6 (2021)

**ವಿಷಯ:** ಪದವಿ ಮಟ್ಟದ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು :ಸಾ.ಸ.8:7 (2021)

**ವಿಷಯ:** ಪದವಿ ಮಟ್ಟದ ಭಾರತ ಸಂವಿಧಾನ, ಮಾನವ ಹಕ್ಕುಗಳು ಲಿಂಗ ಸಮತೆ/ಸಮಾನತೆ (Gender Equity) ಮತ್ತು ಪರಿಸರ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಭಾರತ ಸಂವಿಧಾನ, ಮಾನವ ಹಕ್ಕುಗಳು ಲಿಂಗ ಸಮತೆ/ಸಮಾನತೆ (Gender Equity) ಮತ್ತು ಪರಿಸರ ವಿಷಯಗಳ ಅಧ್ಯಯನ ಮಂಡಳಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ರಚಿಸಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:8 (2021)

**ವಿಷಯ:** ಪದವಿ ಮಟ್ಟದ ಭೌತಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಭೌತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:9 (2021)

**ವಿಷಯ:** ಪದವಿ ಮಟ್ಟದ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:10 (2021)

**ವಿಷಯ:** ಪದವಿ ಮಟ್ಟದ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:11 (2021)

**ವಿಷಯ:** ಪದವಿ ಮಟ್ಟದ ಗಣಿತಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:12 (2021)

**ವಿಷಯ:** ಪದವಿ ಮಟ್ಟದ ಸಂಖ್ಯಾಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಸಂಖ್ಯಾಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:13 (2021)

**ವಿಷಯ:** ಪದವಿ ಮಟ್ಟದ ಫ್ಯಾಶನ್ ಡಿಸೈನ್, ಗಾರ್ಮೆಂಟ್ ಡಿಸೈನ್ ಮತ್ತು ಲೆದರ್ ಡಿಸೈನ್ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸದರಿ ಕಾರ್ಯಕ್ರಮಗಳಿಗೆ ಸಂಬಂಧಿಸಿ National Institute of Fashion Technology, New Delhi, ಪ್ರತಿಷ್ಠಿತ ಖಾಸಗಿ ಸಂಸ್ಥೆಗಳಿಂದ, ಅನುಭವಿ ಉದ್ಯಮಿಗಳನ್ನು ಬಾಹ್ಯ ಸದಸ್ಯರುಗಳನ್ನಾಗಿ ಆಹ್ವಾನಿಸಿಕೊಂಡು ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:14 (2021)

**ವಿಷಯ:** ಪದವಿ ಮಟ್ಟದ ಕಂಪ್ಯೂಟರ್ ಸಾಯನ್ಸ್ ಮತ್ತು ಕಂಪ್ಯೂಟರ್ ಅಪ್ಲಿಕೇಶನ್ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಕಂಪ್ಯೂಟರ್ ಸಾಯನ್ಸ್ ಮತ್ತು ಕಂಪ್ಯೂಟರ್ ಅಪ್ಲಿಕೇಶನ್ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:15 (2021)

**ವಿಷಯ:** ಸ್ನಾತಕೋತ್ತರ ಜೀವ ವಿಜ್ಞಾನ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಜೀವ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:16 (2021)

**ವಿಷಯ:** ಸ್ನಾತಕೋತ್ತರ ಕಂಪ್ಯೂಟರ್ ಸಾಯನ್ಸ್, ಎಂ.ಸಿ.ಎ ಮತ್ತು ಪಿ.ಜಿ.ಡಿ.ಸಿ.ಎ. ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಕಂಪ್ಯೂಟರ್ ಸಾಯನ್ಸ್, ಎಂ.ಸಿ.ಎ ಮತ್ತು ಪಿ.ಜಿ.ಡಿ.ಸಿ.ಎ. ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:17 (2021)

**ವಿಷಯ:** ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:18 (2021)

**ವಿಷಯ:** ಸ್ನಾತಕೋತ್ತರ ಮಾನವಪ್ರಜ್ಞೆ ಹಾಗೂ ಯೋಗವಿಜ್ಞಾನ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಮಾನವಪ್ರಜ್ಞೆ ಹಾಗೂ ಯೋಗವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:19 (2021)

**ವಿಷಯ:** ಸ್ನಾತಕೋತ್ತರ ವ್ಯವಹಾರ ಆಡಳಿತ (ಎಂ.ಬಿ.ಎ.) ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ವ್ಯವಹಾರ ಆಡಳಿತ (ಎಂ.ಬಿ.ಎ.) ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:20 (2021)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮತ್ತು ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.8:21 (2021)

**ವಿಷಯ:** ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರ ನೇಮಕಾತಿ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.8:22 (2021)

**ವಿಷಯ:** ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆ/ದಿನಭತ್ಯೆ ಪಾವತಿಸುವ ಬಗ್ಗೆ.

**ನಿರ್ಣಯ:** ತಾತ್ಕಾಲಿಕ ಚಾಲಕರು/ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆ /ದಿನಭತ್ಯೆ ಹಾಗೂ ರಾತ್ರಿ ಪಾಳಯದಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕರಿಗೆ ಮಾಹೆಯಾನ ರೂ.500/- ಹಾಗೂ ಟ್ರಿಪ್ ಒಂದರ ರೂ.100/-ರಂತೆ ಪಾವತಿಸುವ ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.8:23 (2021)

ವಿಷಯ: ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಅಂಕವಹಿಗಳನ್ನು ಡಿಜಿಟೈಸ್ ಮಾಡಿರುವ ವೆಚ್ಚದ ಪಾವತಿಗೆ ಅನುಮೋದನೆ ನೀಡುವ ಬಗ್ಗೆ.

ನಿರ್ಣಯ: Digitisation ಕಾರ್ಯಕ್ಕೆ ಸಂಬಂಧಿಸಿ ವಿಶ್ವವಿದ್ಯಾನಿಲಯದ ತಾಂತ್ರಿಕ ಪರಿಣಿತರ ವರದಿಯ ಆಧಾರದ ಮೇಲೆ KSEDC ( KEONICS) ಸಂಸ್ಥೆಗೆ ಪಾವತಿಸಿರುವ ಮುಂಗಡ ಮೊತ್ತ ರೂ.18,30,770/- (ರೂಪಾಯಿ ಹದಿನೆಂಟು ಲಕ್ಷದ ಮೂವತ್ತು ಸಾವಿರದ ಏಳುನೂರ ಎಪ್ಪತ್ತು ಮಾತ್ರ) ರ ಹೊಂದಾಣಿಕೆ ಬಗ್ಗೆ ಅನುಮೋದನೆ ಮತ್ತು ಪಾವತಿಸಲು ಬಾಕಿ ಇರುವ ರೂ.17,42,880/- (ರೂಪಾಯಿ ಹದಿನೇಳು ಲಕ್ಷದ ನಲ್ವತ್ತೆರಡು ಸಾವಿರದ ಎಂಟು ನೂರ ಎಂಬತ್ತು ಮಾತ್ರ) ಹಾಗೂ ರೂ.89,46,691/- (ರೂಪಾಯಿ ಎಂಬತ್ತೊಂಬತ್ತು ಲಕ್ಷದ ನಲ್ವತ್ತಾರು ಸಾವಿರದ ಆರು ನೂರ ತೊಂಬತ್ತೊಂದು ಮಾತ್ರ) ವನ್ನು ಪಾವತಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.8:24 (2021)

ವಿಷಯ: ಡಾ. ದೊರೆಸ್ವಾಮಿ, ಪ್ರಾಧ್ಯಾಪಕರು ಇವರ ವೈದ್ಯಕೀಯ ಚಿಕಿತ್ಸೆಗೆ ನೀಡಿದ ಮುಂಗಡ ಮಂಜೂರಾತಿ ಬಗ್ಗೆ.

ನಿರ್ಣಯ: ಡಾ. ದೊರೆಸ್ವಾಮಿ, ಪ್ರಾಧ್ಯಾಪಕರು, ಇವರ ವೈದ್ಯಕೀಯ ಚಿಕಿತ್ಸೆಗೆ ವಿಶೇಷ ನೆಲೆಯಲ್ಲಿ ನೀಡಿದ ಮುಂಗಡ ಮೊತ್ತ ರೂ.3,50,000.00(ರೂಪಾಯಿ ಮೂರು ಲಕ್ಷದ ಐವತ್ತು ಸಾವಿರ ಮಾತ್ರ)ಕ್ಕೆ ಮಂಜೂರಾತಿ ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.8:25 (2021)

ವಿಷಯ: ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಇರುವ ವಿವಿಧ ಅಧಿಕಾರಿಗಳ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ (Delegation of Powers) ನ್ನು ಪರಿಷ್ಕರಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಗಿ ಸರಕಾರದ ಅನುಮೋದನೆಗೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.8:26 (2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣ, ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಹಾಗೂ ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿರುವ ಸಿ.ಸಿ. ಕ್ಯಾಮರಗಳ ವಾರ್ಷಿಕ ನಿರ್ವಹಣೆಯ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕಷವಾಗಿ ಚರ್ಚಿಸಿ, ಹಿಂಪಡೆಯಲು ನಿರ್ಣಯಿಸಲಾಯಿತು. ಮುಂದುವರಿದು, ಸಿ.ಸಿ. ಕ್ಯಾಮರಗಳ ವಾರ್ಷಿಕ ನಿರ್ವಹಣೆ, ಬೇಕಾಗುವ ಉಪಕರಣಗಳ ವೆಚ್ಚ, ರಿಪೇರಿ ವೆಚ್ಚ ಮತ್ತು ಕೆಟ್ಟು ಹೋದ ಸಾಮಾಗ್ರಿಗಳನ್ನು ಬದಲಾಯಿಸುವ ವೆಚ್ಚ ಹಾಗೂ ನಿರ್ವಹಣೆಗೆ ಬೇಕಾಗುವ ಪರಿಣಿತ ಸಿಬ್ಬಂದಿಗಳನ್ನು ನೇಮಿಸಿಕೊಂಡು ಶ್ರೀ ವಿಜಯ್, ಕಂಪ್ಯೂಟರ್ ಆಪರೇಟರ್, ಗಣಕ ವಿಜ್ಞಾನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ವಹಿಸಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.8:27 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2022ನೇ ಸಾಲಿನ ಡೈರಿ, ಕ್ಯಾಲೆಂಡರ್ ಮುದ್ರಣದ ಕುರಿತು.

**ನಿರ್ಣಯ:** ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ. 8:28(2021)

**ವಿಷಯ:** ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿಗೆ ಮರದ ಪೀಠೋಪಕರಣಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ. 8:29(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಛೇರಿಗೆ ಅಗತ್ಯವಿರುವ 500 Ream A4 size ಹಾಗೂ 500 Ream FS Size ಜೆರಾಕ್ಸ್ ಪೇಪರ್‌ಗಳನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ. 8:30(2021)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪ್ರತ್ಯೇಕಿಸಿ ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ. 8:31(2021)

**ವಿಷಯ:** ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮಂಡಳಿಗೆ ಪ್ರೊ.ವಿನಯರಜತ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಅಧ್ಯಯನ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಿಸಿ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ. 8:32(2021)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಹಿಂದಿ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಪದವಿ ಮತ್ತು ಸ್ನಾತಕೋತ್ತರ ಹಿಂದಿ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ. 8:33(2021)

**ವಿಷಯ:** ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ಇಲ್ಲಿ ಬಿ.ವೋಕ್ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಪುನರಾವರ್ತಿತ ಕಾರ್ಯಸೂಚಿಯಾಗಿರುವುದರಿಂದ ಇದನ್ನು ಹಿಂಪಡೆಯಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ. 8:34(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಂದ ಶೈಕ್ಷಣಿಕ ವರ್ಷ 2014-15ನೇ ಸಾಲಿನಿಂದ ಸಂಗ್ರಹಿಸಿರುವ ಸಂಯೋಜನಾ / ಸೇವಾ ಶುಲ್ಕದ ಮೇಲೆ Service Tax ಹಾಗೂ ಶೈಕ್ಷಣಿಕ ವರ್ಷ 2017-18 ನೇ ಸಾಲಿನಿಂದ ಸಂಗ್ರಹಿಸಿರುವ ಸಂಯೋಜನಾ / ಸೇವಾ ಶುಲ್ಕದ ಮೇಲೆ GST ಪಾವತಿಸುವ ಕುರಿತು.

**ನಿರ್ಣಯ:** ಸಂಯೋಜನಾ/ಸೇವಾ ಶುಲ್ಕದ ಮೇಲೆ Service Tax ಮತ್ತು ಸಂಯೋಜನಾ/ ಸೇವಾ ಶುಲ್ಕದ ಮೇಲೆ GST ಪಾವತಿಸುವ ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾಸ.8:35(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಸ್ವಾಯತ್ತ ಕಾಲೇಜುಗಳಿಗೆ ಸಂಬಂಧಿಸಿದ ಅನುಶಾಸನದ ತಿದ್ದುಪಡಿ ಬಗ್ಗೆ

**ನಿರ್ಣಯ:** ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.8:36 (2021)

**ವಿಷಯ:** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ M.Sc. Chemistry ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಪುನರಾವರ್ತಿತ ಕಾರ್ಯಸೂಚಿಯಾಗಿರುವುದರಿಂದ ಇದನ್ನು ಹಿಂಪಡೆಯಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.8:37(2021)

**ವಿಷಯ:** ಶ್ರೀಮತಿ ಶ್ಯಾಮಲ, ಶೀಘ್ರಲಿಪಿಗಾರರು, ಕುಲಪತಿಯವರ ಕಾರ್ಯಾಲಯ ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಸದರಿಯವರಿಂದ ಫಿಟನೆಸ್ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವ ಷರತ್ತಿನ ಮೇರೆಗೆ ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ. 8:38(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ ಖಾಯಂಗೊಂಡಿರುವ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ 2010ರ ಹೈಕೋರ್ಟು ಆದೇಶದಂತೆ ನೀಡಲು ಬಾಕಿಯಿರುವ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.8:39(2021)

**ವಿಷಯ:** ಶ್ರೀ ಶಿವಾನಂದ ಪೂಜಾರಿ ದ್ವಿತೀಯ ದರ್ಜೆ ಸಹಾಯಕರು ಇವರ ವೇತನಕ್ಕೆ ಸ್ಟೆಪಿಂಗ್ ಅಪ್ ನೀಡಿ ಜೇಷ್ಠತೆಯಲ್ಲಿ ಅವರಿಗಿಂತ ಕಿರಿಯ ನೌಕರರಾದ ಶ್ರೀ ಬಿಳಿಯ ದೇವಾಡಿಗ, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ನಿಗದಿಗೊಳಿಸಲಾದ ವೇತನಕ್ಕೆ ಏರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.8:40(2021)

**ವಿಷಯ:** ದಿನಾಂಕ 01.01.2006 ರಿಂದ ಜಾರಿಗೊಂಡಿರುವ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯ/ಸ್ನಾತಕೋತ್ತರ ಕೇಂದ್ರ /ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ –ಸ್ಕ್ರೀನಿಂಗ್–ಕಂ–ಇವ್ಯಾಲ್ಯುವೇಶನ್/ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.8:41(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಪ್ರಾಧ್ಯಾಪಕರುಗಳ ಕರಡು ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋ:ದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾಸ.8:42(2021)

**ವಿಷಯ:** ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿನ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗದ ಬೋಧಕರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಎಂ.ಎಸ್ಸಿ. ಜೀವರಸಾಯನಶಾಸ್ತ್ರ ಕೋರ್ಸ್‌ಗೆ ವರ್ಗಾವಣೆ ಮಾಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಎಂ.ಎಸ್ಸಿ. ಜೀವರಸಾಯನಶಾಸ್ತ್ರ ಕಾರ್ಯಕ್ರಮದ ಸಂಯೋಜಕರಾಗಿರುವ ಡಾ.ಬಿ.ಕೆ. ಸರೋಜಿನಿ ಇವರು ಸಬ್ಬಾಟಿಕಲ್ ರಜೆಗೆ ತೆರಳಿದ್ದು ವಿಭಾಗದಲ್ಲಿ ಅನ್ಯ ಖಾಯಂ ಶಿಕ್ಷಕರು ಯಾರೂ ಲಭ್ಯವಿಲ್ಲದಿರುವುದರಿಂದ ಡಾ. ಚಂದ್ರಶೇಖರ ಗಜಾನನ ಜೋಷಿ, ಸಹ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇವರನ್ನು ಒಂದು ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಎಂ.ಎಸ್ಸಿ. ಜೀವರಸಾಯನಶಾಸ್ತ್ರ ವಿಭಾಗಗಕ್ಕೆ ನಿಯೋಜನೆಗೊಳಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ. 8:43(2021)

**ವಿಷಯ:** ಶ್ರೀ ದಯಾಕರ್ ಬಿ., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು (ನಿವೃತ್ತ) ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರ ನಿವೃತ್ತಿ ವಯಸ್ಸನ್ನು 62 ಕ್ಕೆ ನಿಗದಿಗೊಳಿಸಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:12467/2017 (S-RES)ರಲ್ಲಿ ನೀಡಿರುವ ಅಂತಿಮ ತೀರ್ಪಿನ ಅನುಷ್ಠಾನದ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ. 8:44(2021)

**ವಿಷಯ:** ಮುಖ್ಯ ಛಾಯಾಗ್ರಾಹಕ ಹುದ್ದೆಯ ಸೃಜನೆಗೆ ಸಂಬಂಧಿಸಿದ ಕರಡು ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ. 8:45(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಮಂಗಳಗಂಗೋತ್ರಿ ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರ ಜ್ಞಾನ ಕಾವೇರಿ ಚಿಕ್ಕ ಅಳುವಾರ ಇಲ್ಲಿಗೆ ಭದ್ರತಾ ಸೂಪರ್ ನ್ವೈಸರ್ ಹಾಗೂ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ನೀಡುವ ಬಗ್ಗೆ

**ನಿರ್ಣಯ:** ಸದರಿ ಪ್ರಸ್ತಾವನೆಯನ್ನು ಖರೀದಿ ಸಮಿತಿಯಲ್ಲಿ ಮರುಪರಿಶೀಲಿಸಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ. 8:46(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಮಂಗಳಗಂಗೋತ್ರಿ ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರ ಜ್ಞಾನ ಕಾವೇರಿ ಚಿಕ್ಕ ಅಳುವಾರ ಇಲ್ಲಿಗೆ ಶುಚಿತ್ವ ತೋಟಗಾರಿಕಾ ಹಾಗೂ 'ಡಿ' ಗ್ರೂಪ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ನೀಡುವ ಬಗ್ಗೆ

**ನಿರ್ಣಯ:** ಸದರಿ ಪ್ರಸ್ತಾವನೆಯನ್ನು ಖರೀದಿ ಸಮಿತಿಯಲ್ಲಿ ಮರುಪರಿಶೀಲಿಸಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ : ಸಾ.ಸ.8:47 (2021)

**ವಿಷಯ:** ಸಮಾಜಕಾರ್ಯ ವಿಭಾಗದ ಬೋಧಕ ಸಿಬ್ಬಂದಿಗಳ ದೂರಿನ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿ ಪ್ರಕರಣವನ್ನು Internal Complaints Committee (ICC)ಯಲ್ಲಿ ಮಂಡಿಸಿ, ವಿಚಾರಣೆಯನ್ನು ಮುಂದುವರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:48 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗ/ಕೋರ್ಸುಗಳಿಗೆ Adjunct Professor ಗಳ ನೇಮಕಾತಿ ಬಗ್ಗೆ.

**ನಿರ್ಣಯ:** ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸಲಾಯಿತು. ಸ್ನಾತಕೋತ್ತರ ವಿಭಾಗಗಳಿಂದ Adjunct Faculty ನೇಮಕಾತಿಗೆ ಸಂಬಂಧಿಸಿ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು

ಪರಿಶೀಲಿಸಲು ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಎಮ್.ಎಸ್.ತಳವಾರ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಮುಂದಿನ ಕ್ರಮಕ್ಕೆಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮುಂದುವರಿದು, ಕಳೆದ ಎರಡು ವರ್ಷಗಳಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ Adjunct Professor ಗಳ ವಿವರಗಳನ್ನು ಖರ್ಚು ವೆಚ್ಚಗಳ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.8:49(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕ್ರಿಶ್ಚಿಯಾನಿಟಿ ಪೀಠಕ್ಕೆ ಮುಖ್ಯಸ್ಥರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:** Rev. Dr. Ivan D'Souza ಇವರನ್ನು ಕ್ರಿಶ್ಚಿಯಾನಿಟಿ ಪೀಠಕ್ಕೆ ಮುಖ್ಯಸ್ಥರನ್ನಾಗಿ ನೇಮಕ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.8:50(2021)

**ವಿಷಯ:** UGC-Scheme for development of Sports Infrastructure Equipment in University during XII plan ಯೋಜನೆ ಅಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಒಳಾಂಗಣ ಕ್ರೀಡಾಂಗಣಕ್ಕೆ ಧ್ವನಿವರ್ಧಕವನ್ನು ಖರೀದಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ. 8:51(2021)

**ವಿಷಯ:** UGC-Scheme for development of Sports Infrastructure Equipment in University during XII plan ಅಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಲ್ಯಾಪ್‌ಟಾಪ್ ಖರೀದಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ. 8:52(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು / ಕೋರ್ಸುಗಳು ಕೇಂದ್ರಗಳು/ಘಟಕ ಕಾಲೇಜುಗಳಿಗೆ ಅಗತ್ಯವಿರುವ ಯುಪಿಎಸ್ ಮತ್ತು ಬ್ಯಾಟರಿಗಳನ್ನು ಖರೀದಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. ಸದರಿ ಉಪಕರಣಗಳ ನೈಜತೆ ಬಗ್ಗೆ ಬಾಹ್ಯ ತಜ್ಞರನ್ನು ಆಹ್ವಾನಿಸಿಕೊಂಡು ದೃಢೀಕರಣ ಪಡೆದುಕೊಳ್ಳಬೇಕೆಂಬುದಾಗಿಯೂ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ. 8:53(2021)
ವಿಷಯ: ನ್ಯಾಕ್ ಮಾರ್ಗಸೂಚಿಯನುಸಾರ ಹಿಮ್ಮಾಹಿತಿ ವರದಿಗಳ (Feedback reports) ಅನುಮೋದನೆ ಬಗ್ಗೆ.
ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಅಭಿವೃದ್ಧಿ : ಸಾ.ಸ.8:54 (2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಸಾಂಸ್ಕೃತಿಕ ಮತ್ತು ಜಾನಪದ ವೈಭವಗಳನ್ನು ಪ್ರತಿಬಿಂಬಿಸುವ ಮೂರು ಆಯಾಮದ ಶಿಲ್ಪಾ ಕಲಾಕೃತಿ ರಚಿಸುವ ಪ್ರಸ್ತಾವನೆ ಬಗ್ಗೆ.
ನಿರ್ಣಯ: ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯದಲ್ಲಿ ರಚಿಸಲಾದ ಸಾಂಸ್ಕೃತಿಕ ನೀತಿ ರಚನಾ ಸಮಿತಿಯಲ್ಲಿ ಮಂಡಿಸಿ ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾಸ.8:55(2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Wayne State University Detroit, USA ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.
ನಿರ್ಣಯ: ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು. ಮುಂದುವರಿದು, ಸರಕಾರದ ಅನುಮೋದನೆಗೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಹಾಗೂ ಹೊರ ದೇಶದ ವಿಶ್ವವಿದ್ಯಾನಿಲಯಗಳೊಂದಿಗೆ ಒಡಂಬಡಿಕೆ ಮಾಡುವ ಸಂದರ್ಭಗಳಲ್ಲಿ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ. 8:56(2021)
ವಿಷಯ: CARRT ಕೇಂದ್ರದ BRNS ಪ್ರಾಜೆಕ್ಟ್‌ನಡಿ ಖರೀದಿಸಿರುವ Gamma Chamber 5000 ನ ದುರಸ್ತಿಗೊಳಿಸುವ ಬಗ್ಗೆ
ನಿರ್ಣಯ: ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ. 8:57(2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಮಂಗಳ ಸಭಾಂಗಣದ ಆಸನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ – ಅಂದಾಜುಪಟ್ಟಿಯ ಅನುಮೋದನೆ
ನಿರ್ಣಯ: ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:58 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಮಂಗಳ ಸಭಾಂಗಣದ ವೇದಿಕೆಯನ್ನು ದುರಸ್ತಿಗೊಳಿಸುವ ಕಾಮಗಾರಿ – ಅಂದಾಜುಪಟ್ಟಿಯ ಅನುಮೋದನೆ

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:59(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮಾನ್ಯ ಕುಲಪತಿಯವರ ಬಂಗಲೆ, ಕುಲಸಚಿವರ ಬಂಗಲೆ ಹಾಗೂ ಕುಲಸಚಿವರು (ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಯವರ ಅಧಿಕೃತ ನಿವಾಸಗಳಿಗೆ ಸೂಕ್ತ ಜನರೇಟರ್‌ನ್ನು ಖರೀದಿಸಿ ಅಳವಡಿಸುವ ಕಾಮಗಾರಿ – ಅಂದಾಜುಪಟ್ಟಿಯ ಅನುಮೋದನೆ

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:60(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ 'ಎ' ಮಾದರಿ ವಸತಿಗೃಹ ಸಂಖ್ಯೆ – 6,7,8,10,12 ಇವುಗಳಿಗೆ ವಾಹನ ತಂಗುದಾಣ ನಿರ್ಮಾಣ ಕಾಮಗಾರಿ – ಅಂದಾಜುಪಟ್ಟಿಯ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:61(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ 'ಸಿ' ಮಾದರಿ ವಸತಿಗೃಹ ಸಂಖ್ಯೆ – 2,3,4,26,27ರ ನಿರ್ವಹಣಾ ಕಾಮಗಾರಿ – ಅಂದಾಜುಪಟ್ಟಿಯ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:62(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ 'ಸಿ' ಮಾದರಿ ವಸತಿಗೃಹ ಬ್ಲಾಕ್ –1 (ವಸತಿಗೃಹ ಸಂಖ್ಯೆ – 1,2,3,4,5 ಮತ್ತು 6) ಕ್ಕೆ ವಾಹನ ತಂಗುದಾಣ ನಿರ್ಮಾಣ ಕಾಮಗಾರಿ – ಅಂದಾಜುಪಟ್ಟಿಯ ಅನುಮೋದನೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:63(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ನಂದಾದೀಪ ವಿದ್ಯುತ್ ಸ್ಥಾವರದಿಂದ ಜ್ಞಾನದೀಪ ವಿದ್ಯುತ್ ಸ್ಥಾವರಕ್ಕೆ ಮುಂದುವರಿದು ಆಡಳಿತ ಸೌಧ ಕಟ್ಟಡದವರೆಗೆ H.T. ARIAL BUNCHED CABLE ಅಳವಡಿಸುವ ಕಾಮಗಾರಿ – ಅಂದಾಜುಪಟ್ಟಿಯ ಅನುಮೋದನೆ

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8: 64(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಮಾನವ ಪ್ರಜ್ಞೆ ಯೋಗ ವಿಜ್ಞಾನ ಕಟ್ಟಡದ ಮೊದಲನೇ ಅಂತಸ್ತಿನ ಭಾಗಶಃ ನಿರ್ಮಾಣ ಕಾಮಗಾರಿ – ಅಂದಾಜುಪಟ್ಟಿಯ ಅನುಮೋದನೆ

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:65(2021)

**ವಿಷಯ:** Main gate for Administrative Building at Mangalore University Campus - ಅಂದಾಜುಪಟ್ಟಿಯ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:66(2021)

**ವಿಷಯ:** Construction of Ladies Toilets at FMKMC College Campus, Madikeri, Kodagu Dist., – ಅಂದಾಜುಪಟ್ಟಿಯ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:67(2021)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು 100 KVA ಪರಿವರ್ತಕದಿಂದ ಮುಖ್ಯ ಪ್ಯಾನಲ್‌ವರೆಗೆ ಯುಜಿ ಕೇಬಲ್ ಅಳವಡಿಸುವ ಕಾಮಗಾರಿ – ಟೆಂಡರ್ ಅಂಗೀಕರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:68(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಮಂಗಳೂರು ಇಲ್ಲಿಯ ಹೆಚ್ಚುವರಿ ವಿದ್ಯುತ್ ಸಂಪರ್ಕ ನೀಡುವ ಸಲುವಾಗಿ 250 KVA Transformer ನ್ನು ಖರೀದಿಸಿ ಅಳವಡಿಸುವ ಬಗ್ಗೆ ಟೆಂಡರ್ ಅಂಗೀಕರಿಸುವ ಬಗ್ಗೆ

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:69(2021)

**ವಿಷಯ:** Supplying and commissioning of 250 KVA DG set Mangala Auditorium at Mangalore University Campuis - ಟೆಂಡರ್ ಅಂಗೀಕರಿಸುವ ಬಗ್ಗೆ

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:70(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಆವರಣದಲ್ಲಿರುವ ಕುಲಸಚಿವರ ಅಧಿಕೃತ ನಿವಾಸದ ಮರು ವಿದ್ಯುದ್ದೀಕರಣ ಕಾಮಗಾರಿ – ಟೆಂಡರ್ ಅಂಗೀಕರಿಸುವ ಬಗ್ಗೆ

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ. 8:71(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆಡಳಿತ ಸೌಧ ಕಟ್ಟಡಕ್ಕರ ಲಿಫ್ಟ್ ಅಳವಡಿಸುವ ಕಾಮಗಾರಿ – ಟೆಂಡರ್ ಅಂಗೀಕರಿಸುವ ಬಗ್ಗೆ

ನಿರ್ಣಯ: ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ. 8:72(2021)

ವಿಷಯ: ಪ್ಯಾಕೇಜ್ ಸಂಖ್ಯೆ – 13

(1–40) ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯವರ ಬಂಗ್ಲೆಯ ಹೊರ ಪಾರ್ಶ್ವದ ಮತ್ತು ಆವರಣದ ಗೋಡೆಗೆ ಬಣ್ಣ ಬಳಿಯುವುದು ಮತ್ತು ಅಗತ್ಯದ ದುರಸ್ತಿ ಕಾಮಗಾರಿ

(2–40) ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ ಆವರಣದಲ್ಲಿರುವ ಇನ್ ಕ್ಯೂಬೇಶನ್ ಸೆಂಟರಿನಲ್ಲಿ ದತ್ತಾಂಶ ಕೇಂದ್ರ ಸ್ಥಾಪಿಸಲು ಅಗತ್ಯ ಪೂರಕ ಕಾಮಗಾರಿ – ಯೋಜಿತ ಜನರೇಟರಿಗೆ ಪೆಡಸ್ಟಲ್ ನಿರ್ಮಾಣ – ಇವುಗಳ ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ. 8:73(2021)

ವಿಷಯ: Construction of Asphalting approach road to Science block at Jnana Kaveri campus P.G. center Chikka Aluvara Kodagu Dist Pertaining to Mangalore University (Reserved for Schedule Caste) – ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದೂಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ. 8:74(2021)

ವಿಷಯ: Providing 40 K.L.D. capacity STP (Sewage Treatment Plant) for boys hostels at Mangalore University Campus, Mangalagangothri (CALL 2) – ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ ಸಾ.ಸ. 8:75(2021)

ವಿಷಯ: Providing Galvalume Sheet roofing to C type Quarters block No.1,2 and 3 at Mangalore University Mangalagangothri (Reserved for Schedule Caste) – ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು

ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:76(2021)

**ವಿಷಯ:** Construction of Tennnis Court wall at Mangalore University Campus for the sports skill training for the Students of Physical Education and sportsmen of Mangalore University (Reserved for Scheduled Tribe) - ಟೆಂಡರ್ ಅಂಗೀಕರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:77 (2021)

**ವಿಷಯ:** Construction of Class Room (Including Technologically enabled class room) for University College, Mangalore component of RUSA 2.0 – Variation Approval.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:78(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ವಿಜ್ಞಾನ ಸಂಕೀರ್ಣ ಕಟ್ಟಡದ ವಿಶೇಷ ದುರಸ್ತಿ ಕಾಮಗಾರಿ (ರೂಸಾ ಅನುದಾನ) – ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಐಟಂ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:79 (2021)

**ವಿಷಯ:** Construction of Pavilion for the Play ground of Mangalore University Campus Mangalagangothri - ಹೆಚ್ಚುವರಿ ಪರಿಮಾಣ ಮತ್ತು (Excess Quantity –Work Slip) ಹಾಗೂ ಹೆಚ್ಚುವರಿ ಐಟಂ ಹಾಗೂ ಪರಿಷ್ಕೃತ ಅಂದಾಜು ಮೊತ್ತದ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8:80(2021)

**ವಿಷಯ:**
ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮಂಗಳ ಆಡಿಟೋರಿಯಂ ಕಟ್ಟಡದ ಮುಂಭಾಗದಲ್ಲಿ ಇಂಟರ್‌ಲಾಕ್ ಹಾಗೂ ನೀರಿನ ಚರಂಡಿ ಒದಗಿಸುವ ಕಾಮಗಾರಿ – ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಐಟಂಗಳನ್ನೊಳಗೊಂಡ ಪರಿಷ್ಕೃತ ಅಂದಾಜು ಪಟ್ಟಿ ಹಾಗೂ ಕಾಲಾವಧಿ ವಿಸ್ತರಣೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:**
ದಿನಾಂಕ 11.11.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ. 8: 81(2021)

**ವಿಷಯ:**
ಕರ್ನಾಟಕ ಗೃಹ ಮಂಡಳಿ ವತಿಯಿಂದ ಠೇವಣಿ ವಂತಿಕೆ ಆಧಾರದಲ್ಲಿ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಬೆಳಪು ಗ್ರಾಮದಲ್ಲಿ ನಿರ್ಮಿಸಲಾಗುತ್ತಿರುವ ಅತ್ಯಾಧುನಿಕ ವಿಜ್ಞಾನ ಸಂಶೋಧನಾ ಕೇಂದ್ರದ ಕಾಮಗಾರಿಗಳಿಗೆ ಮೂರನೇ ಹಂತದ ಅನುದಾನ ಬಿಡುಗಡೆ ಮಾಡುವ ಕುರಿತು.

**ನಿರ್ಣಯ:**
**ಬಿಡುಗಡೆಗೆ ಕೋರಿದ ರೂ.20.00 ಕೋಟಿಯಲ್ಲಿ ಸದ್ಯಕ್ಕೆ ಲಭ್ಯವಿರುವ ರೂ.05.00 ಕೋಟಿ** ಮೊತ್ತವನ್ನು ಪಾವತಿಸಲು ಹಾಗೂ ಪ್ರಸ್ತುತ ಬೆಳಪುವಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಪೂರ್ಣ ವಿವರಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ವರದಿ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:82(2021)

**ವಿಷಯ:**
ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಡಾ. ಎಂ. ಜಯಶಂಕರ್ ಪ್ರಾಧ್ಯಾಪಕರು ಸ್ನಾತಕೋತ್ತರ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರು ಹೂಡಿರುವ ರಿಟ್ ಅರ್ಜಿ ಸಂಖ್ಯೆ 8240/2021 (ಎಸ್ ಆರ್ ಇ ಎಸ್) ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರ ವಕೀಲರಾದ ಶ್ರೀ ಅರುಣ್ ಶ್ಯಾಂ ಎಂ ಇವರ ಬಿಲ್ಲಿನ ಮೊತ್ತ ಪಾವತಿ ಬಗ್ಗೆ.

**ನಿರ್ಣಯ:**
ಶ್ರೀ ಅರುಣ್ ಶ್ಯಾಂ ಎಂ ಇವರ ಬಿಲ್ಲಿನ ಮೊತ್ತ ರೂ.2,00,000.00 (ರೂಪಾಯಿ ಎರಡು ಲಕ್ಷಗಳು ಮಾತ್ರ) ಪಾವತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಸದರಿಯವರ ಸಂಸ್ಥೆಯ ನಾಮಾಂಕಿತದಲ್ಲಿ ವ್ಯತ್ಯಯವಿರುವುದನ್ನು ಸಿಂಡಿಕೇಟು ಗಮನಿಸಿ, ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ನ್ಯಾಯವಾದಿಗಳ ಯಾದಿಯಲ್ಲಿ ಅರುಣ್ ಶ್ಯಾಂ ಅಸೋಸಿಯೆಟ್ಸ್ ಎಂಬುದಾಗಿ ಬದಲಾವಣೆ ಮಾಡಲು ಸೂಚಿಸಲಾಯಿತು.**

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:83(2021)

**ವಿಷಯ:**
ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಡಾ. ಅರಬಿ ಯು., ಪ್ರಾಧ್ಯಾಪಕರು ಅರ್ಥಶಾಸ್ತ್ರ ವಿಭಾಗ, ಇವರು ಹೂಡಿರುವ ರಿಟ್ ಅರ್ಜಿ ಸಂಖ್ಯೆ 15070/2020 ಗೆ

ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರ ವಕೀಲರಾದ ಶ್ರೀ ಟಿ.ಪಿ. ರಾಜೇಂದ್ರ ಕುಮಾರ್ ಸುಂಗೆ ಹಾಗೂ ಹಿರಿಯ ನ್ಯಾಯವಾದಿ ಶ್ರೀ ಮಧುಸೂಧನ್ ಆರ್. ನಾಯ್ಕ್ ಇವರ ಬಿಲ್ಲಿನ ಮೊತ್ತ ಪಾವತಿ ಬಗ್ಗೆ.

**...ರ್ಣಯ:** ಶ್ರೀ ಮಧುಸೂಧನ್ ಆರ್. ನಾಯ್ಕ್ ಇವರ ಬಿಲ್ಲಿನ ಮೊತ್ತ ರೂ.5,00,000.00 (ರೂಪಾಯಿ ಐದು ಲಕ್ಷಗಳು ಮಾತ್ರ) ಮತ್ತು ಶ್ರೀ ಟಿ.ಪಿ. ರಾಜೇಂದ್ರ ಕುಮಾರ್ ಸುಂಗೆ ಇವರ ಬಿಲ್ಲಿನ ಮೊತ್ತ ರೂ.85,000.00 (ರೂಪಾಯಿ ಎಂಬತ್ತೈದು ಸಾವಿರ ಮಾತ್ರ) ಪಾವತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ. 8:84(2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ವಜೀದಾ ಬಾನೊ, ಡಾ.ದಯಾನಂದ ನಾಯ್ಕ್ ಮತ್ತು ಡಾ. ನಾಗಪ್ಪ ಗೌಡ ಆರ್ ಇವರನ್ನು ಅವರು ಮೂಲತಃ ನೇರ ನೇಮಕಗೊಂಡಿದ್ದ ಘಟಕ ಕಾಲೇಜುಗಳಿಗೆ ಮರುವರ್ಗಾವಣೆಗೊಳಿಸಲು ದಿನಾಂಕ 27.08.2021ರ ಸಿಂಡಿಕೇಟು ಸಭೆಯಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಗೊಳಿಸುವಂತೆ ಸದರಿಯವರು ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಹಾಗೂ ಇತರರ ವಿರುದ್ಧ ಹೂಡಿರುವ ರಿಟ್ ಅರ್ಜಿ ಸಂಖ್ಯೆ 17243/2021 ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರವಾಗಿ ಹೂಡಬೇಕಾಗಿರುವ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

**ನಿರ್ಣಯ:** ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ. 8:85 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಮೂಲತಃ ಗ್ರಂಥಾಲಯ ಸಹಾಯಕರಾಗಿ ನೇರ ನೇಮಕಗೊಂಡು ನಂತರ ಸಹಾಯಕ ಗ್ರಂಥಪಾಲಕರಾಗಿ ಮುಂಬಡ್ತಿಗೊಂಡು ರಾ.ವೇ.ಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೆ.ಕೆ. ಬಾದಾಮಿ (ನಿವೃತ್ತ) ಶ್ರೀಮತಿ ಬಿ.ಎಸ್. ಜಯಲಕ್ಷ್ಮಿ (ನಿವೃತ್ತ) ಶ್ರೀಮತಿ ಕೆ. ಎಸ್. ಸುಮಂಗಲ ಮತ್ತು ಶ್ರೀ ಎಂ.ಸಿ. ಜಯಪ್ಪ (ನಿವೃತ್ತ) ಇವರು ತಮಗೆ ಯು.ಜಿ.ಸಿ. ವೇತನ ಶ್ರೇಣಿಯನ್ನು ವಿಸ್ತರಿಸುವಂತೆ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಕ್ರಮವಾಗಿ ಹೂಡಿದ್ದ ರಿಟ್ ಅರ್ಜಿಗಳು ಸಂಖ್ಯೆ:23444/2017 (ಎಸ್) 23445/2017 (ಎಸ್), 23446/2017(ಎಸ್) ಮತ್ತು 23447/2017(ಎಸ್) ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರ ವಕೀಲರಾದ ಶ್ರೀ ಟಿ.ಪಿ. ರಾಜೇಂದ್ರ ಸುಂಗೆ ಇವರು ಸಲ್ಲಿಸಿರುವ ಬಿಲ್ಲುಗಳ ಮೊತ್ತ ಪಾವತಿ ಬಗ್ಗೆ.

**ನಿರ್ಣಯ:** ಶ್ರೀ ಟಿ.ಪಿ. ರಾಜೇಂದ್ರ ಸುಂಗೆ ಇವರ ಬಿಲ್ಲಿನ ಮೊತ್ತ ರೂ.80,000.00 (ರೂಪಾಯಿ ಎಂಬತ್ತು ಸಾವಿರಗಳು ಮಾತ್ರ) ಪಾವತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ. 8:86 (2021)

**ವಿಷಯ:** ಡಾ. ಅರಬಿ ಯು., ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರ ಅಮಾನತು – ಅವಧಿಯ ನಿರ್ಣಯದ ಬಗ್ಗೆ.

**ನಿರ್ಣಯ:** ಡಾ. ಅರಬಿ ಯು ಇವರ ಅಮಾನತನ್ನು ಮುಂದುವರಿಸಲು ಹಾಗೂ ಜೀವನಾಧಾರ

ಭತ್ಯೆಯನ್ನು ನಿಯಮಾನುಸಾರ (ಶೇಕಡಾ 100) ಪಾವತಿಸಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ. 8:87 (2021)

**ವಿಷಯ:** ಡಾ. ಅನಿತಾ ರವಿಶಂಕರ್, ಸಮಾಜಶಾಸ್ತ್ರದ ಸಹ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ಮಂಗಳೂರು ಲೋಕಾಯುಕ್ತ ಪೋಲೀಸ್ ಠಾಣಾ ಮೊಕದ್ದಮೆ – ಅಪರಾಧ ನಿರ್ಣಯದ ಬಗ್ಗೆ.

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.8:88 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಭಾರತ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ. 8:89 (2021)

**ವಿಷಯ:** CARER ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ – ಉಪಕರಣದ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ. 8:90 (2021)

**ವಿಷಯ:** CARER ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ – LSC ಉಪಕರಣದ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ನಿಯಮಾನುಸಾರ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ. 8:91 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು (Re-designing & Revamping) ಮರು ವಿನ್ಯಾಸ ಮತ್ತು ಪರಿಷ್ಕರಣೆ ಮಾಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಹಿಂಪಡೆಯಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ ಮರು ವಿನ್ಯಾಸ ಮತ್ತು ಪರಿಷ್ಕರಣೆಗೆ ಸಂಬಂಧಿಸಿ ಪರಾಮರ್ಶಿಸಿಕೊಂಡು ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾಸ.8:92 (2021)

**ವಿಷಯ:** ಕಡಬ ತಾಲೂಕಿನ ನೆಲ್ಯಾಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು ಖಾಸಗಿ ಕಟ್ಟಡದಲ್ಲಿ ನಡೆಸಲು ಬಾಡಿಗೆ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾಸ.8:93 (2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಎ.ಜೆ. ಹಾಸ್ಪಿಟಲ್ ಮತ್ತು ರಿಸರ್ಚ್ ಸೆಂಟರ್ ಮಧ್ಯೆ ಮಾಡಿಕೊಳ್ಳುವ ಒಡಂಬಡಿಕೆಯ ಅವಧಿ ವಿಸ್ತರಿಸುವ ಕುರಿತು.
ನಿರ್ಣಯ: ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ. 8:94(2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕೈಗಾರಿಕಾ ರಸಾಯನಶಾಸ್ತ್ರ ವಿಭಾಗಕ್ಕೆ Dissolution Tester ಉಪಕರಣ ಖರೀದಿ ಕುರಿತು ಟೆಂಡರ್ ಪ್ರಸ್ತಾವನೆ ಬಗ್ಗೆ.
ನಿರ್ಣಯ: ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ. 8:95(2021)
ವಿಷಯ: ವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಔಷಧ/ಔಷಧೀಯ ವಸ್ತುಗಳನ್ನು ಖರೀದಿಸುವ ಬಗ್ಗೆ.
ನಿರ್ಣಯ: ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು ಮತ್ತು ಖರೀದಿಗೆ ಘಟನೋತ್ತರ ಮಂಜೂರಾತಿ

ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ. 8:96(2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಮಂಗಳ ಕ್ಯಾಂಟೀನ್, ಆಡಳಿತ ಸೌಧದ ಕ್ಯಾಂಟೀನ್ , ಕಾವೇರಿ ಮತ್ತು ನೇತ್ರಾವತಿ ಅತಿಥಿ ಗೃಹಗಳಲ್ಲಿ ಫುಡ್ ಕೋರ್ಟ್ ಸ್ಥಾಪನೆ –ನಿರ್ವಹಿಸುವ ಪ್ರಸ್ತಾವನೆಯ ಬಗ್ಗೆ.
ನಿರ್ಣಯ: ದಿನಾಂಕ 12.11.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ. 8:97 (2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕಾರ್ಯಕಾರಿ ಅಭಿಯಂತರರ ಕಚೇರಿಗೆ ಮಂಜೂರಾದ ತಾಂತ್ರಿಕ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ಕ್ರೋಢೀಕೃತ ಪರಿನಿಯಮದ ಅನುಮೋದನೆ ಬಗ್ಗೆ.
ನಿರ್ಣಯ: ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಸಾ.ಸ. 8:98 (2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಟೆಕ್ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಬಗ್ಗೆ.
ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಸಾ.ಸ. 8:99 (2021)
ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವದ ಬಗ್ಗೆ.
ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ

ಮುಖ್ಯ ಅಥಿತಿಗಳ ಮತ್ತು ಅಪೂರ್ವ ಸಾಧಕರಿಗೆ ನೀಡಲಾಗುವ ಗೌರವ ಡಾಕ್ಟರೇಟ್ ಪದವಿಗೆ ವ್ಯಕ್ತಿಗಳನ್ನು ಅರ್ಹರೆಂದು ಪರಿಗಣಿಸಿ, ಸಂಭಾವ್ಯ ಪಟ್ಟಿಯನ್ನು ತಯಾರಿಸಲಾಯಿತು. ಸದರಿ ವಿಚಾರದ ಬಗ್ಗೆ ಅಂತಿಮ ನಿರ್ಣಯವನ್ನು ಮುಂದಿನ **ವಿಶೇಷ ಸಿಂಡಿಕೇಟು ಸಭೆಯಲ್ಲಿ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ. 8:100 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ /ಘಟಕ/ಸ್ವಾಯತ್ತ ಕಾಲೇಜುಗಳ **ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.**

**ನಿರ್ಣಯ:** **ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಪುನರ್ ಪರಿಶೀಲಿಸಿಕೊಂಡು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.**

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ. 8:101(2021)

**ವಿಷಯ:** **ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಆಳ್ವಾಸ್ ಕಾಲೇಜು, ಮೂಡಬಿದ್ರೆ ಜಂಟಿಯಾಗಿ ಸಹಯೋಗದೊಂದಿಗೆ ಆಳ್ವಾಸ್ ಕಾಲೇಜಿನ ಕ್ರೀಡಾಂಗಣದಲ್ಲಿ 2021–22ನೇ ಸಾಲಿನ All India Inter University Athletic Championship (Men) ನ್ನು ಆಯೋಜಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.**

**ನಿರ್ಣಯ:** **ಮಂಗಳೂರು ವಿಶ್ವವಿದ್ಯಾನಿಲಯ – ಜಂಟಿ ಸಹಯೋಗದೊಂದಿಗೆ ಆಳ್ವಾಸ್** ವಿದ್ಯಾಸಂಸ್ಥೆಯ ಕ್ರೀಡಾಂಗಣದಲ್ಲಿ 2021–22ನೇ ಸಾಲಿನ All India Inter University Athletic Championship (Men)ನ್ನು ಆಯೋಜಿಸಲು ರೂ.40,00,000/- (ರೂಪಾಯಿ ನಲ್ವತ್ತು ಲಕ್ಷಗಳು ಮಾತ್ರ) ಅನುದಾನವನ್ನು **ಬಿಡುಗಡೆ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.**

**ಇತರ ವಿಷಯಗಳು:**

1. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಬಿ.ವೊಕೇಷನಲ್ ಕಾರ್ಯಕ್ರಮವನ್ನು ಪ್ರಾರಂಭಿಸಲು ಸೂಕ್ತ ಕ್ರಮಕ್ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
2. ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಲೆಕ್ಕಾಚಾರಗಳನ್ನು Double Entry Systemನಲ್ಲಿ ಕೈಗೊಳ್ಳಬೇಕಾಗಿದ್ದು ಸ್ನಾತಕೋತ್ತರ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳನ್ನು ಇಂಟರನ್‌ಶಿಪ್ ರೀತಿಯಲ್ಲಿ ಬಳಸಿಕೊಂಡು ಅತೀ ಶೀಘ್ರವಾಗಿ 2022, ಮಾರ್ಚ್ 31ರೊಳಗಾಗಿ ಮುಕ್ತಾಯಗೊಳಿಸಲು ಹಣಕಾಸು ಅಧಿಕಾರಿಯವರಿಗೆ ಸೂಚಿಸಲಾಯಿತು.
3. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿ ಸಂಭಾವನೆ ಪಾವತಿಯಾಗದಿರುವ ಬಗ್ಗೆ ಮಾನ್ಯ ಸಿಂಡಿಕೇಟು ಸದಸ್ಯರಾದ ರಮೇಶ್ ಕೆ ಇವರು ಸಭೆಯಲ್ಲಿ ಚರ್ಚಿಸಿದಾಗ ವಿಶ್ವವಿದ್ಯಾನಿಲಯದಿಂದ ಈಗಾಗಲೇ ಸಂಬಂಧಪಟ್ಟ ಅತಿಥಿ ಉಪನ್ಯಾಸಕರ ಬ್ಯಾಂಕ್ ಖಾತೆಗೆ ಸಂದಾಯ ಮಾಡಿರುವ ವಿಚಾರವನ್ನು ಹಣಕಾಸು ಅಧಿಕಾರಿಯವರು ಸಭೆಯ ಗಮನಕ್ಕೆ ತಂದರು. ಈ ವಿಚಾರವನ್ನು ಸಂಬಂಧಪಟ್ಟ ಕಾಲೇಜು **ಪ್ರಾಂಶುಪಾಲರುಗಳಿಗೆ ಇ–ಮೇಲ್ ಮುಖಾಂತರ ತಿಳಿಸಲು ಸಭೆಯಲ್ಲಿ ನಿರ್ಣಯಿಸಿತು.**

4. ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜುಗಳಲ್ಲಿ ಶೈಕ್ಷಣಿಕ ವರ್ಷ 2021-22ನೇ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳ ಪ್ರವೇಶಾತಿ ಮತ್ತು ಪರೀಕ್ಷಾ ಪ್ರಕ್ರಿಯೆಯ ದಾಖಲೆಗಳನ್ನು ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಇಲಾಖೆಯು ಅಭಿವೃದ್ಧಿ ಪಡಿಸಿರುವ ಸಾಫ್ಟ್‌ವೇರ್ ಆದ ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯಡಿ (UUCMS) ಕೈಗೊಳ್ಳಬೇಕಾಗಿರುವ ವಿಚಾರವನ್ನು ಸಭೆಗೆ ತಿಳಿಸಿದರು.

ಮುಂದುವರಿದು, ಉಳಿದ ವಿದ್ಯಾರ್ಥಿಗಳ ದಾಖಲೆಗಳನ್ನು ವಿಶ್ವವಿದ್ಯಾನಿಲಯ ಓಪನ್ ಸೋರ್ಸ್ ಸಾಫ್ಟ್ ವೇರ್‌ನಲ್ಲಿ ದಾಖಲಿಸಲು ಕ್ರಮಕೈಗೊಳ್ಳುವುದಾಗಿ ಹಾಗೂ ಸದರಿ ಪ್ರಕ್ರಿಯೆಗೆ ಸಂಬಂಧಿಸಿ ನುರಿತ ತಜ್ಞ ಸಿಬ್ಬಂದಿಗಳ ಸೇವೆಯನ್ನು ಬಳಸಿಕೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

5. ದೇಶ ವಿದೇಶಗಳ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿರುವ ಆಸಕ್ತ, ಅನುಭವಿ ಹಾಗೂ ಉನ್ನತ ಮಟ್ಟದ ಪರಿಣತಿ ಹೊಂದಿರುವ ವಿಷಯ ತಜ್ಞರುಗಳನ್ನು Adjunct Facultyಗಳಾಗಿ ಅವರ ಸೇವೆಯನ್ನು ವಿಶ್ವವಿದ್ಯಾನಿಲಯದಲ್ಲಿ ಬಳಸಿಕೊಳ್ಳಬಹುದೆಂಬುದಾಗಿ ಮಾನ್ಯ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಎ ಕೋಟೆಗಾರ್ ಇವರು ಸಲಹೆ ನೀಡಿದರು.

6. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜನೌಷಧಿ ಕೇಂದ್ರವನ್ನು ಸ್ಥಾಪಿಸಲು ಸೂಕ್ತ ಕ್ರಮಕೈಗೊಳ್ಳಬೇಕಾಗಿ ನಿರ್ಣಯಿಸಿ, ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದ ಬಗ್ಗೆ ಇರುವ ಪ್ರತಿಕ್ರಿಯೆಯನ್ನು ಕಲೆ ಹಾಕಲು ಪ್ರಶ್ನಾವಳಿಗಳನ್ನು ಗೂಗಲ್ ಶೀಟ್ ಮುಖಾಂತರ ರೂಪಿಸಿಕೊಂಡು ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ತಿಳಿಸಿದರು.

7. ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕಚೇರಿಗಳು ಮತ್ತು ಘಟಕ ಕಾಲೇಜುಗಳಲ್ಲಿ ದಾಸ್ತಾನು ವಹಿಯನ್ನು ನಿರ್ವಹಿಸಲು ಸೂಕ್ತ ಕ್ರಮಕೈಗೊಳ್ಳಬೇಕಾಗಿ ತಿಳಿಸುತ್ತಾ, ಆದ್ಯತೆಯ ಮೇರೆಗೆ "ಮಾಸ್ಟರ್ ಡಿಜಿಟಲ್ ಸ್ಟಾಕ್ ರಿಜಿಸ್ಟರ್" ಅನ್ನು ನಿರ್ವಹಿಸಲು ಸೂಚಿಸಲಾಯಿತು.

8. ಕಟ್ಟಡ ಸಮಿತಿ ಸಭೆಗೆ ಮಂಡಿಸಲಾದ ಕಾರ್ಯಸೂಚಿಗಳನ್ನು ಸಿಂಡಿಕೇಟು ಸಭೆಯ ಅನುಮೋದನೆಗೆ ಮಂಡಿಸುವಾಗ ಎಲ್ಲಾ ಅಗತ್ಯ ದಾಖಲೆಗಳನ್ನು ಲಗತ್ತಿಸಿಕೊಂಡು ಕಾರ್ಯಸೂಚಿಗಳನ್ನು ಮಂಡಿಸಲು ಸೂಚಿಸಲಾಯಿತು.

9. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಪೀಠಗಳು ಮತ್ತು ಅಧ್ಯಯನ ಕೇಂದ್ರಗಳ ಪ್ರತಿ ತಿಂಗಳ ಕಾರ್ಯವೈಖರಿಯ ಮಾಹಿತಿಯನ್ನು ಮತ್ತು ಸಂಯೋಜಕರುಗಳ ವಿವರಗಳ ಮಾಹಿತಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ನೀಡಲು ಸೂಚಿಸಲಾಯಿತು.

ಮಾನ್ಯ ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |